ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೨

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತಾರನೇ ಅಧಿವೇಶನ**

**ಮಂಗಳವಾರ, ದಿನಾಂಕ: ೧೨ನೇ ಆಗಸ್ಟ್, ೨೦೨೫**

---

**ಸಮೂಹ – II**

೧. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಮತ್ತು ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

---

## ಸಹಕಾರ ಸಂಘಗಳು ಉತ್ಪಾದಿಸುವ ವಸ್ತುಗಳ ಮಾರಾಟ ಮತ್ತು ಸರಬರಾಜು ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೧೬ (೨೫೨) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಿಲ್ಲಾ ಕೈಗಾರಿಕಾ ಉತ್ಪಾದನಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘಗಳು ಎಷ್ಟು ;

(ಆ) ಸದರಿ ಸಂಘಗಳು ಉತ್ಪಾದಿಸುವ ವಸ್ತುಗಳನ್ನು ಸರ್ಕಾರವೇ ಖರೀದಿಸಿ, ಮಾರಾಟ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಹೌದಾದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು ?

## ಬಳ್ಳಾರಿಯ ಬುಡಾದಿಂದ ಸೈಟ್ ಖರೀದಿಸಿದವರಿಗೆ ಮೂಲಸೌಲಭ್ಯ ನೀಡದಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೭ (೩೬೭) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಅನುಮೋದಿತ ಬಡಾವಣೆಗಳಿಗೆ ಅನುಮತಿ ನೀಡಲು ವಿಳಂಬ ಮಾಡುತ್ತಿರುವುದರಿಂದಾಗಿ ಅನುಮೋದಿತ ನಿವೇಶನಗಳ ಖರೀದಿದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಬಡಾವಣೆಗಳ ಅನುಮೋದನೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಸಂಗ್ರಹಿಸಿದ ನಂತರವೂ ಕೂಡ, ಖರೀದಿದಾರರು ನೀರು, ವಿದ್ಯುತ್ ಮತ್ತು ಒಳಚರಂಡಿ ಸಂಪರ್ಕಗಳನ್ನು ಪಡೆಯಲು ತೊಂದರೆ ಅನುಭವಿಸುತ್ತಿರುವುದು ನಿಜವೇ ;

(ಇ) ಜೆಸ್ಕಾಂ/ನಿಗಮದ ಕೇಬಲ್‌ಗಳ ಸಣ್ಣ ಪುಟ್ಟ ದುರಸ್ತಿ ಮಾಡಲು ಸಹ ತರಬೇತಿ ಪಡೆದ ಸಿಬ್ಬಂದಿಗಳೇ ಇಲ್ಲದೆ ಸಂಬಂಧಪಟ್ಟ ಸಿಬ್ಬಂದಿಗಳ ಬಳಿ ಈ ಕೇಬಲ್‌ಗಳಿಗೆ ಸಂಬಂಧಿಸಿದ ತೀರಾ ಅಗತ್ಯವಿರುವ ಬಿಡಿ ಭಾಗಗಳೂ ಸಹ ಇರುವುದಿಲ್ಲ ; ಹಾಗಾಗಿ ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ ;

(ಈ) ಆರ್.ಎಸ್., ಜಮೀನುಗಳು ಮತ್ತು ಎನ್.ಎ., ಜಮೀನುಗಳಲ್ಲಿನ ಅನಧಿಕೃತ ಬಡಾವಣೆಗಳಲ್ಲಿರುವ ನಿವೇಶನಗಳಿಗೆ 'ಬಿ' ಖಾತಾ ಮತ್ತು ನೀರು, ವಿದ್ಯುತ್ ಮತ್ತು ಒಳಚರಂಡಿ ಸಂಪರ್ಕಗಳೊಂದಿಗೆ ನಿವೇಶನದ ನಕ್ಷೆಯನ್ನು ನೀಡಲಾಗುತ್ತಿದೆ ; ಆದರೆ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಅನುಮೋದಿತ ಬಡಾವಣೆಗಳಲ್ಲಿನ ನಿವೇಶನಗಳಿಗೆ ಮೂಲಭೂತ ಸೌಕರ್ಯಗಳಿಲ್ಲದಿರಲು ಕಾರಣಗಳೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ ?

## ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೧೮ (೨೮೨) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೨ ವರ್ಷದಲ್ಲಿ ರಾಜ್ಯದಲ್ಲಿರುವ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಭಿವೃದ್ಧಿಗಾಗಿ ಸರ್ಕಾರವು ಬಿಡುಗಡೆ ಮಾಡಿದ ಒಟ್ಟು ಅನುದಾನ ಎಷ್ಟು ; ಇಲ್ಲದಿದ್ದಲ್ಲಿ, ಯಾವ ಕಾರಣಕ್ಕಾಗಿ ಬಿಡುಗಡೆ ಮಾಡಿರುವುದಿಲ್ಲ ಮಾಹಿತಿಯೊಂದಿಗೆ ವರದಿ ನೀಡುವುದು ಯಾವ ಕಾಲಮಿತಿಯೊಳಗೆ ಅನುದಾನ ಬಿಡುಗಡೆ ಮಾಡಲಾಗುವುದು ; (ಕಾಮಗಾರಿವಾರು ಮಾಹಿತಿ ನೀಡುವುದು)

(ಆ) ಸದರಿ ವಿಶ್ವವಿದ್ಯಾಲಯಗಳಿಗೆ ಮೂಲಭೂತ ಸೌಕರ್ಯ ಹಾಗೂ ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮಗಳೇನು ; (ವಿವರ ನೀಡುವುದು)

(ಇ) ಬಾಗಲಕೋಟೆ ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ವಿವಿಧ ರೀತಿಯ ಕೃಷಿ ಸಂಶೋಧನೆಗಳನ್ನು ಕೈಗೊಳ್ಳಲು ಸರ್ಕಾರದ ಅನುದಾನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ; (ವಿವರ ನೀಡುವುದು)

(ಈ) ಬಾಗಲಕೋಟೆ ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ವಿವಿಧ ರೀತಿಯ ಕೃಷಿ ಸಂಶೋಧನೆಗಳನ್ನು ಕೈಗೊಳ್ಳಲು ಸುಮಾರು ೨೦೦–೨೫೦ ಎಕರೆ ಜಾಗವನ್ನು ಸರ್ಕಾರವು ಮಂಜೂರು ಮಾಡುವುದೆ ; ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು ?

## ಸಿಂದನೂರು ನಗರಕ್ಕೆ ಕುಡಿಯುವ ನೀರು ಒದಗಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೯ (೨೩೯) ಪೌರಾಡಳಿತ ಮತ್ತು ಹಜ್‌ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂದನೂರು ನಗರದಿಂದ ೧೫ ಕಿ.ಮೀ. ದೂರದಲ್ಲಿರುವ ತುರುವಹಾಳ ಗ್ರಾಮದ ವ್ಯಾಪ್ತಿಯಲ್ಲಿ ೨೫೧ ಎಕರೆಯ ಬೃಹತ್ ಕೆರೆ ಇದ್ದು, ಈಗಾಗಲೇ ೨೪/೭ ಕುಡಿಯುವ ನೀರಿನ ಯೋಜನೆ ಚಾಲ್ತಿಯಲ್ಲಿದ್ದರೂ ಸಹ ಸಿಂದನೂರು ನಗರಕ್ಕೆ ಐದು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದ್ದು, ಸಮರ್ಪಕವಾಗಿ ನೀರಿನ ಪೂರೈಕೆಯಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸಿಂದನೂರು ನಗರದ ಜನತೆಯ ಬಹು ನಿರೀಕ್ಷಿತ ಕನಸಿನ ಯೋಜನೆಯಾದ ೨೪/೭ ಯಾವಾಗ ಪ್ರಾರಂಭಿಸಲಾಗುವುದು ?

## ಬಾಗಲಕೋಟೆ ಜಿಲ್ಲೆಯ ರೈತರಿಗೆ ವಿಶೇಷ ಪ್ಯಾಕೇಜ್ ಮತ್ತು ಬೆಳೆಗಳ ಶೇಖರಣೆಗೆ ಶೈತ್ಯಾಗಾರ ನಿರ್ಮಿಸುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೦ (೨೫೫) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ಇತ್ತೀಚೆಗೆ ದಾಳಿಂಬೆ ಬೆಳೆಗೆ ದುಂಡಾಣು ರೋಗ, ಕೊಳೆರೋಗ, ಸೊರಗು ರೋಗ, ಕಾಂಡಕೊರಕ ಕೀಟದ ರೋಗಗಳಿಂದ

ರೈತರು ಹಾನಿ ಅನುಭವಿಸುತ್ತಿರುವ ಗಂಭೀರ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ನಷ್ಟಗೊಂಡ ದಾಳಿಂಬೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆಯೇ ;

(ಆ) ದಾಳಿಂಬೆ ಜೊತೆಗೆ ಪೇರಲಾ, ದ್ರಾಕ್ಷಿ ಇತ್ಯಾದಿ ಹಣ್ಣುಗಳು ಅಲ್ಲದೇ ಅರಿಸಿನ ಹಾಗೂ ಕೆಂಪು ಮೆಣಸಿನಕಾಯಿ ಕೂಡಾ ಹೆಚ್ಚಾಗಿ ಬೆಳೆಯುತ್ತಿದ್ದು, ಅವುಗಳಿಗೆ ಯೋಗ್ಯ ದರ ದೊರಕದೆ ಇರುವ ಸಂದರ್ಭಗಳಲ್ಲಿ ಶೇಖರಿಸಿ ಮುಧೋಳ ಹಾಗೂ ಜಮಖಂಡಿ ತಾಲ್ಲೂಕಿನಲ್ಲಿ ಬಹಳ ದಿನಗಳಿಂದ ರೈತರು ಶೈತ್ಯಾಗಾರಕ್ಕಾಗಿ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ?

## ಮೆ: ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯು ರೈತರಿಂದ ಕೃಷಿ ಜಮೀನು ಖರೀದಿಸಿ ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೨೧ (೨೬೧) ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದ ಮೆ: ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ಹಂಗನಹಳ್ಳಿ, ಉಡಗಿ, ಹುಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರಿಂದ ಕೃಷಿ ಜಮೀನು ಖರೀದಿಸಿ ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮೆ: ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯ ನಾಲ್ಕನೇ ಘಟಕಕ್ಕಾಗಿ ರೈತರ ಜಮೀನು ಖರೀದಿಸಿ ಅಧಿಸೂಚನೆ ಹೊರಡಿಸುವಾಗ ಭೂ ಅಧಿನಿಯಮ ೧೯೬೧ ಕಲಂ ೧೦೯(೧)ರ ಸ್ಪಷ್ಟ ಉಲ್ಲಂಘನೆ ಮಾಡಿ ರೈತರಿಗೆ ಮೋಸ ಮಾಡಿರುವುದು ಗಮನಿಸಲಾಗಿದೆಯೇ ;

(ಇ) ಜಮೀನು ಕಳೆದುಕೊಂಡ ರೈತರು ೧೬೧೨ ದಿನಗಳ ಧರಣಿ ಸತ್ಯಾಗ್ರಹ ನಡೆಸಿ ೨೨ ಜನ ರೈತರು ಪ್ರಾಣ ಕಳೆದುಕೊಂಡರು ಅವರಿಗೆ ಹೆಚ್ಚುವರಿ ಪರಿಹಾರ ರೂ.೪.೫೦ ಲಕ್ಷ ನೀಡದಿರಲು ಕಾರಣಗಳೇನು ;

(ಈ) ಡಾ: ಸರೋಜಿನಿ ಮಹಿಷಿ ವರದಿಯ ಆದೇಶದಂತೆ ಧರಣಿ ನಿರತ ರೈತರು ಪ್ರಾಣ ಕಳೆದುಕೊಂಡಿದ್ದರಿಂದ ಪ್ರತಿ ಕುಟುಂಬಕ್ಕೆ ರೂ.೧೦ ಲಕ್ಷ ಪರಿಹಾರವನ್ನು ಹಾಗೂ ಜಮೀನು ಕಳೆದುಕೊಂಡ ರೈತರ ಕುಟುಂಬದ ಸದಸ್ಯರಿಗೆ ಕಂಪನಿಯಲ್ಲಿ ಖಾಯಂ ಹುದ್ದೆ ನೀಡಲು ಸರ್ಕಾರ ಚಿಂತಿಸುವುದೇ ;

(ಉ) ರೈತರ ಜಮೀನಿಗೆ ಸೂಕ್ತ ಪರಿಹಾರ ನೀಡದೆ ಮೋಸ ಮಾಡುತ್ತಿರುವ ಕಂಪನಿಗಳ ವಿರುದ್ಧ ನ್ಯಾಯಾಂಗ ತನಿಖೆ ಕೈಗೊಂಡು ರೈತರಿಗೆ ಸಹಾಯ ಮಾಡಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ?

## ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರುಗಳ ಗೌರವಧನ ಹೆಚ್ಚಳ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೨ (೨೫೩) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರ ಸ್ಥಳೀಯ ಸಂಸ್ಥೆಗಳಾದ ನಗರ ಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳ ಅಧ್ಯಕ್ಷರುಗಳು ಮತ್ತು ಸದಸ್ಯರುಗಳ ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; ಗೌರವಧನವನ್ನು ಹೆಚ್ಚಿಸುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ;

(ಆ) ಸದರಿ ಸದಸ್ಯರುಗಳ ಗೌರವಧನವನ್ನು ಈ ಹಿಂದೆ ಯಾವಾಗ ಪರಿಷ್ಕರಿಸಲಾಗಿತ್ತು ; (ವಿವರ ನೀಡುವುದು)

(ಇ) ಪ್ರಸ್ತುತ ಸದರಿ ಸದಸ್ಯರುಗಳ ಗೌರವಧನ ಎಷ್ಟು ಇದೆ ? (ವಿವರ ನೀಡುವುದು)

## ಭೂ–ಸ್ವಾಧೀನ ಪ್ರಮಾಣ ಪತ್ರ ನೀಡುವ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೨೩ (೪೯೭) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧೨೦೦ ಚದರಡಿ ಅಳತೆಯ ನಿವೇಶನಗಳಲ್ಲಿ ಕಟ್ಟಿರುವ ೩ ಅಂತಸ್ತಿನ ಕಟ್ಟಡದ ಮಾಲೀಕರಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ (ಎನ್.ಒ.ಸಿ.) ಪಡೆಯುವುದಕ್ಕೆ ವಿನಾಯಿತಿ ನೀಡಲಾಗಿದೆಯೇ ;

(ಆ) ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–೨೦೨೪ರನ್ವಯ ಸರ್ಕಾರ ಹೊರಡಿಸಿದ ಅಧಿಸೂಚನೆಯಿಂದ ಗ್ರಾಮ ಪಂಚಾಯಿತಿ, ನಗರ ಸಭೆ ಮತ್ತು ಪುರಸಭೆಗಳಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲು ಪ್ರಸ್ತುತ ಇರುವ ಬೈಲಾಗಳಿಂದ ಕಟ್ಟಡ ಮಾಲೀಕರಿಗೆ ಅಡಚಣೆಯಾಗುವುದಿಲ್ಲವೇ ;

(ಇ) ರಾಜ್ಯದ ಎಲ್ಲಾ ಗ್ರಾಮ ಮತ್ತು ನಗರಗಳಲ್ಲಿ ಕಟ್ಟಡ ಮಾಲೀಕರು ಈ ರೀತಿ ಸ್ವಾಧೀನಾನುಭವ ಪ್ರಮಾಣ ಪತ್ರ (ಎನ್.ಒ.ಸಿ.) ವಿನಾಯಿತಿ ಪಡೆಯಬೇಕಿದ್ದರೆ, ಈ ಯೋಜನೆ ಅನುಷ್ಠಾನಗೊಳಿಸಲು ಸಾಧ್ಯವಾಗುವುದೇ ; ಹಾಗಿದ್ದಲ್ಲಿ, ಇದರ ಕುರಿತು ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ ? (ಮಾಹಿತಿ ಒದಗಿಸುವುದು)

## ಹಾಪ್‌ಕಾಮ್ಸ್ ಮಳಿಗೆಗಳು ಮುಚ್ಚಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೨೪ (೨೬೭) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಹಾಪ್‌ಕಾಮ್ಸ್ ಮಳಿಗೆಗಳ ಸಂಖ್ಯೆಯೆಷ್ಟು ; ಪ್ರಸ್ತುತ ಎಷ್ಟು ಹಾಪ್‌ಕಾಮ್ಸ್‌ಗಳು ವಹಿವಾಟು ನಡೆಸುತ್ತಿದೆ ; ಎಷ್ಟು ಮಳಿಗೆಗಳನ್ನು ಬಂದ್ ಮಾಡಲಾಗಿದೆ ; ಬಂದ್ ಆಗಿದ್ದಲ್ಲಿ, ಆಗಲು ಕಾರಣವೇನು ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಹಾಪ್‌ಕಾಮ್ಸ್ ಮಳಿಗೆಯಲ್ಲಿ ಯಾವ ಯಾವ ಪದಾರ್ಥಗಳನ್ನು ಮಾರಾಟ ಮಾಡಬೇಕೆಂಬ ನಿಯಮ ಇದೆಯೇ ; ಕೆಲವೊಂದು ಮಳಿಗೆಗಳಲ್ಲಿ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದು, ಹಾಪ್‌ಕಾಮ್ಸ್ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬೆಂಗಳೂರು ನಗರ ಭಾಗದ ಅನೇಕ ಕಡೆ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಅಕ್ಕಿ ಮೂಟೆ ಹಾಗೂ ಇನ್ನಿತರೆ ತೋಟಗಾರಿಕೆಯ ಬೆಳೆಗಳಲ್ಲದ ಸಾಮಗ್ರಿಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಪ್‌ಕಾಮ್ಸ್ ಸಂಸ್ಥೆಯ ಮೂಲ ಉದ್ದೇಶವೇನು ;

(ಈ) ಹಾಗಿದ್ದಲ್ಲಿ, ಇದುವರೆಗೂ ಎಷ್ಟು ಮಳಿಗೆಗಳನ್ನು ಪರಿಶೀಲಿಸಲಾಗಿದೆ ; ತೆಗೆದುಕೊಂಡ ಕ್ರಮವೇನು ; ಇದರಿಂದ ರೈತರಿಗೆ ಅನಾನುಕೂಲವಾಗುವುದಿಲ್ಲವೇ ;

(ಉ) ಪ್ರಸ್ತುತ ಎಷ್ಟು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ; ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆಯೆಷ್ಟು ; ಸಿಬ್ಬಂದಿಯ ಕೊರತೆಯಿಂದ ಸಂಸ್ಥೆಯ ದಿನನಿತ್ಯದ ಕೆಲಸ ಕಾರ್ಯಕ್ಕೆ ತೊಂದರೆಯಾಗುತ್ತಿಲ್ಲವೇ ;

(ಊ) ಹಾಪ್‌ಕಾಮ್ಸ್ ಸಂಸ್ಥೆ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿರುವುದು ನಿಜವೇ ; ಹಾಗಿದ್ದಲ್ಲಿ, ಇದರಿಂದ ಹೊರಬರಲು ಇಲಾಖೆ ಯಾವ ಕ್ರಮ ತೆಗೆದುಕೊಂಡಿದೆ ;

(ಋ) ಹಾಪ್‌ಕಾಮ್ಸ್ ಸರ್ಕಾರದಿಂದ ಸಾಲ ಪಡೆದುಕೊಂಡಿದೆಯೇ ; ಹಾಗಿದ್ದಲ್ಲಿ, ಶೇಕಡ ಬಡ್ಡಿ ದರವೆಷ್ಟು ; ಹಾಗೂ ಸಾಲ ಪಡೆಯುವ ಉದ್ದೇಶವೇನು ?

## ರಾಜ್ಯದ ನೇಕಾರರಿಗೆ ರೂಪಿಸಿರುವ ಯೋಜನೆಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೨೫ (೨೭೨) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನೇಕಾರರ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು ; ಯೋಜನೆಗಳ ಅನುಷ್ಠಾನಕ್ಕೆ ಕೈಗೊಂಡ ಕ್ರಮಗಳೇನು ; ನೇಕಾರರ ಜಾಗೃತಿಗೆ ಹಮ್ಮಿಕೊಂಡ ಕಾರ್ಯಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ನೇಕಾರರ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿ ಆಗಿದೆಯೇ ; ಹಾಗಿದ್ದರೆ, ಯಾವ ರೀತಿಯಾಗಿ ಮತ್ತು ಎಷ್ಟು ಮೊತ್ತದ್ದು ; ರಾಜ್ಯದಲ್ಲಿರುವ ಜವಳಿ ಪಾರ್ಕ್‌ಗಳ ಸಂಖ್ಯೆ ಎಷ್ಟು ; ಸದರಿ ಪಾರ್ಕ್‌ಗಳ ಸ್ಥಿತಿ–ಗತಿ ಹಾಗೂ ಜವಳಿ ಪಾರ್ಕ್‌ಗಳಿಂದ ಆಗಿರುವ ಲಾಭ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೈಮಗ್ಗ ನೇಕಾರರ ಉತ್ಪನ್ನ ಮಾರಾಟಕ್ಕೆ ಸರ್ಕಾರದ ವಿಶೇಷ ಪ್ರಯತ್ನ ಏನು ; ಕೈಮಗ್ಗ ನೇಕಾರರ ಆರ್ಥಿಕ ಸ್ಥಿತಿ ಉತ್ತಮಗೊಂಡಿದೆಯೇ ;

(ಈ) ಕೈಮಗ್ಗ ನೇಕಾರರಿಗೆ ಮತ್ತು ವಿದ್ಯುತ್ ನೇಕಾರರಿಗೆ ಆಗಿರುವ ಲಾಭವೇನು ; ನೇಕಾರರ ಸ್ಥಿತಿ ಉತ್ತಮಗೊಂಡಿರುವ ಬಗ್ಗೆ ಅವರ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿರುವ ಬಗ್ಗೆ ಜಾಹೀರಾತು ಬಂದಿಲ್ಲದಿರುವುದಕ್ಕೆ ಕಾರಣವೇನು ;

(ಉ) ಕೈಮಗ್ಗ ನೇಕಾರರ ಉತ್ಪನ್ನಗಳಿಗೆ ಬೆಂಗಳೂರು ಮಹಾನಗರವನ್ನು ಒಳಗೊಂಡಂತೆ ರಾಜ್ಯ ಇನ್ನಿತರೆ ಯಾವ ನಗರಗಳಲ್ಲಿ ಮಾರಾಟ ಸೌಲಭ್ಯವನ್ನು ಕಲ್ಪಿಸಲಾಗಿದೆ ; ಈ ಮಾರಾಟ ಸ್ಥಳಗಳಲ್ಲಿ ಮಾರಾಟವಾಗಿರುವ ಉತ್ಪನ್ನದ ಒಟ್ಟು ಮೊತ್ತ ಎಷ್ಟು ; ಎಷ್ಟು ಜನ ಕೈಮಗ್ಗ ನೇಕಾರರಿಗೆ ಇದರಿಂದ ನೇರವಾಗಿ ಲಾಭವಾಗಿದೆ ?

## ಚಿಕ್ಕಮಗಳೂರು ನಗರಸಭೆಗೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೨೬ (೨೧೭) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಿಂದ ಚಿಕ್ಕಮಗಳೂರು ನಗರಸಭೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ; ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ ; ಎಷ್ಟು ಅನುದಾನ ಬಳಕೆಯಾಗಿದೆ ; ೨೦೧೮–೧೯ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸದರಿ ನಗರಸಭೆಗೆ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ ; ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಯಾವ ಯಾವ ಯೋಜನೆ ರೂಪಿಸಲಾಗಿದೆ ; ಕಳೆದ ೩ ವರ್ಷಗಳಲ್ಲಿ ಎಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ ; (ಸಂಪೂರ್ಣವಾದ ವಿವರ ನೀಡುವುದು)

(ಇ) ಮಾನ್ಯ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಹಂತ–೪ರಲ್ಲಿ ಚಿಕ್ಕಮಗಳೂರು ನಗರಸಭೆಗೆ ಸಂಬಂಧಿಸಿದಂತೆ ಸಲ್ಲಿಕೆಯಾದ ತಾಂತ್ರಿಕ ಬಿಡ್‌ಗಳನ್ನು ಅನುಮೋದನೆಗೆ ಸಲ್ಲಿಸಿ ಹಲವಾರು ತಿಂಗಳುಗಳು ಕಳೆದರು ಈವರೆಗೂ ಯಾವುದೇ ಪ್ರಕ್ರಿಯೆಗಳು ಆಗದೇ ಇರುವುದು ಸರ್ಕಾರದ ಗಮನಕ್ಕಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ; (ಸಂಪೂರ್ಣವಾದ ವಿವರ ನೀಡುವುದು)

(ಈ) ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯ ಹಿಂದೂ ರುದ್ರಭೂಮಿ, ಉದ್ಯಾನವನಗಳ ಅಭಿವೃದ್ಧಿಗೆ ಈವರೆಗೂ ಬಿಡುಗಡೆಯಾಗಿರುವ ಅನುದಾನವೆಷ್ಟು ; ಅನುದಾನ ಬಿಡುಗಡೆಯಾದರೂ ಈವರೆಗೂ ಅಭಿವೃದ್ಧಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಅಭಿವೃದ್ಧಿಪಡಿಸಲಾಗುವುದು ; (ಸಂಪೂರ್ಣವಾದ ವಿವರ ನೀಡುವುದು)

(ಉ) ನಗರಸಭೆ ವ್ಯಾಪ್ತಿಯಲ್ಲಿನ ಬೀದಿನಾಯಿಗಳ ಕಡಿತದಿಂದ ಹಲವಾರು ಮಂದಿ ದಿನೇ ದಿನೇ ಅಸ್ವಸ್ಥಗೊಳ್ಳುತ್ತಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣವಾದ ವಿವರ ನೀಡುವುದು)

(ಊ) ನಗರಸಭೆ ವ್ಯಾಪ್ತಿಯಲ್ಲಿನ ಬಡಾವಣೆಗಳು ಹಾಗೂ ಇನ್ನಿತರ ರಸ್ತೆಗಳಲ್ಲಿ ಬೀದಿ ದೀಪಗಳ ಕಂಬಗಳಿದ್ದು ಬೀದಿ ದೀಪವನ್ನು ಅಳವಡಿಸಲು ಅನುದಾನದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು ? (ಸಂಪೂರ್ಣವಾದ ವಿವರ ನೀಡುವುದು)

## ರಾಜ್ಯದಲ್ಲಿರುವ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಬದಲಾವಣೆ ಮಾಡುವ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೭ (೨೮೪) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷದಿಂದ ರಾಜ್ಯದಲ್ಲಿ ಕೃಷಿಯೇತರ ಚಟುವಟಿಕೆಗಳಿಗೆ ಎಷ್ಟು ಎಕರೆ ಭೂ ಬದಲಾವಣೆ ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಸರ್ಕಾರದ ಕಾರ್ಯದರ್ಶಿಯವರಿಗೆ ಭೂ ಬದಲಾವಣೆ ಮಾಡಲು ಎಷ್ಟು ಎಕರೆವರೆಗೆ ಅಧಿಕಾರವಿದೆ ; ಸಚಿವರಿಗೆ ಭೂ ಬದಲಾವಣೆ ಮಾಡಲು ಎಷ್ಟು ಎಕರೆ ಮೇಲ್ಪಟ್ಟಿದ್ದರೆ ಕಡತ ಸಲ್ಲಿಸಲಾಗುತ್ತದೆ ;

(ಇ) ರಾಜ್ಯದಲ್ಲಿ ನಗರಸಭೆ ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇ–ಖಾತಾ ಹೊಂದಿರುವವರಿಗೆ ಮನೆ ನಿರ್ಮಾಣ ಮಾಡಲು ಪ್ರಾಧಿಕಾರದಿಂದ ಲೈಸೆನ್ಸ್ ನೀಡದಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಜಾಗಕ್ಕೆ ಸಂಬಂಧಿಸಿದ ಆಡಳಿತಕ್ಕೆ ನಿಯಮಾನುಸಾರ ಆಸ್ತಿ ಕಂದಾಯ ಪಾವತಿ ಮಾಡುತ್ತಿದ್ದರೂ ಸಹ ಮನೆ ನಿರ್ಮಾಣ ಮಾಡಲು ಲೈಸೆನ್ಸ್ ನೀಡದಿರಲು ಕಾರಣಗಳೇನು ; (ವಿವರ ನೀಡುವುದು)

(ಈ) ಇ–ಖಾತಾ ಹೊಂದಿರುವವರು ಮನೆ ನಿರ್ಮಾಣಕ್ಕೆ ಸ್ಥಳೀಯ ಪ್ರಾಧಿಕಾರದ ವತಿಯಿಂದ ಅನುಮತಿ ನೀಡದೇ ಇರುವ ಕಾರಣ ಬ್ಯಾಂಕ್ ಅಥವಾ ಇನ್ನಿತರ ಸಂಸ್ಥೆಗಳಿಂದ ಮನೆ ನಿರ್ಮಾಣಕ್ಕೆ ಸಾಲ ಮಂಜೂರಾಗದೇ ಮನೆ ನಿರ್ಮಾಣ ಮಾಡಲು ತೊಂದರೆಯಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಟ್ರೇಡ್ ಲೈಸೆನ್ಸ್ ನೀತಿಯ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೮ (೧೬೯) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವ್ಯಾಪಾರಸ್ಥರು, ಉದ್ಯಮಿಗಳು ಹಾಗೂ ಸೇವಾ ಕ್ಷೇತ್ರದ ವ್ಯಕ್ತಿಗಳಿಗೆ ಟ್ರೇಡ್ ಲೈಸೆನ್ಸ್ ಪಡೆಯುವುದು ಕಡ್ಡಾಯವೇ ;

(ಆ) ಟ್ರೇಡ್ ಲೈಸೆನ್ಸ್ ಜಾರಿಯ ಮೂಲಕ ರಾಜ್ಯ ಸರ್ಕಾರಕ್ಕೆ ಆಗುವ ಆದಾಯ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ರಾಜ್ಯದಲ್ಲಿ ಎಲ್ಲಾ ಮಹಾನಗರ ಪಾಲಿಕೆಯು ಟ್ರೇಡ್ ಲೈಸೆನ್ಸ್ ನೀಡುವಲ್ಲಿ, ಏಕೀಕೃತ ಮಾರ್ಗದರ್ಶಕ ತತ್ವವನ್ನು ಅನುಸರಿಸುತ್ತಿದೆಯೇ ; (ವಿವರ ಒದಗಿಸುವುದು)

(ಈ) ಟ್ರೇಡ್ ಲೈಸೆನ್ಸ್ ದೊರೆಯುವ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬ, ಅಧಿಕಾರಿಗಳಿಂದ ಆಗುತ್ತಿರುವ ಭ್ರಷ್ಟಾಚಾರದ ಕುರಿತು ಸರ್ಕಾರದ ಗಮನಕ್ಕೆ

ಬಂದಿದೆಯೇ ; ಬಂದಿದ್ದಲ್ಲಿ, ಇದರ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ಲೈಸೆನ್ಸ್ ಶುಲ್ಕದಲ್ಲಿ ಪ್ರದೇಶಾನುಸಾರ ಭಿನ್ನತೆ ಇರುವುದೇ ; ಇದನ್ನು ಏಕೀಕರಿಸುವ ಕುರಿತು ಸರ್ಕಾರದ ನಿಲುವೇನು ?

## SCSP/TSP ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನಗಳ ವಿವರಗಳ ಬಗ್ಗೆ

**ಶ್ರೀ ಹೆಚ್.ಪಿ. ಸುಧಾಮ್‌ದಾಸ್ (ನಾಮನಿರ್ದೇಶನ ಹೊಂದಿದವರು) –**

೨೯ (೧೭೨) ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಕಾಯ್ದೆ SCSP/TSP ಅಡಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ೨೦೨೧–೨೨, ೨೦೨೨–೨೩ ಹಾಗೂ ೨೦೨೪–೨೫ ಹಣಕಾಸು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು ;

(ಆ) ಸದರಿ ಹಣಕಾಸು ವರ್ಷಗಳ ಅವಧಿಗಳಲ್ಲಿ ಇಲಾಖೆಗೆ ಬಿಡುಗಡೆಯಾಗಿರುವ SCSP/TSP ಅನುದಾನಗಳನ್ನು ಯಾವ ಯಾವ ಯೋಜನೆಗಳ ಜಾರಿಗೆ ವ್ಯಯಿಸಲಾಗಿದೆ ;

(ಇ) ಸದರಿ ಕಾಯ್ದೆಯ ಸೆಕ್ಷನ್ ೧೭ರ ಅನ್ವಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ೨೦೨೧ ರಿಂದ ೨೦೨೫ನೇ ಹಣಕಾಸು ವರ್ಷಗಳ ಅವಧಿಗಳಲ್ಲಿ ಪರಿಶಿಷ್ಟ ಸಮುದಾಯ ಹಾಗೂ ಸಾಮಾನ್ಯ ಸಮುದಾಯದ ಅಭಿವೃದ್ಧಿ ಅಂತರವನ್ನು ಗುರುತಿಸಿ ಸಂಬಂಧಿಸಿದ ಸಮುದಾಯ ಅಭಿವೃದ್ಧಿ ಅಭ್ಯಯಿಸಿ/ ಸಮಾಲೋಚಿಸಿ ತಯಾರಿಸಿರುವ, ಅನುದಾನ ವಿನಿಯೋಗಗಳಿಗೆ ಸಂಬಂಧಿಸಿದ ಉಪಯೋಜನೆ ಕಾರ್ಯಯೋಜನೆಗಳು ಏನು ; (ಪ್ರತಿಗಳನ್ನು ಒದಗಿಸುವುದು)

(ಈ) ಸದರಿ ಕಾಯ್ದೆಯ ಸೆಕ್ಷನ್ ೧೫ ಹಾಗೂ ೧೬ರಡಿ ಕಡ್ಡಾಯಪಡಿಸಿರುವಂತೆ ಸದರಿ ಅನುದಾನದಡಿ ಬಿಡುಗಡೆಯಾಗಿರುವ ಹಣವನ್ನು ಕೇವಲ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ವ್ಯಕ್ತಿ ವಾಸಿಸುತ್ತಿರುವ ಕಾಲೋನಿ/ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಬಳಸಲು ಖಾತ್ರಿಪಡಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ಕೈಗೊಂಡಿರುವ ಕ್ರಮಗಳು ಏನು ? (ಸಂಬಂಧಿಸಿದ ದಾಖಲೆ ಒದಗಿಸುವುದು)

## ತೋಟಗಾರಿಕಾ ವಿಶ್ವವಿದ್ಯಾಲಯ ಮತ್ತು ತೋಟಗಾರಿಕಾ ಕಾಲೇಜುಗಳು/ರಿಸರ್ಚ್ ಸೆಂಟರ್‌ಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೦ (೨೩೩) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆಳದಿ ಶಿವಪ್ಪ ನಾಯಕ ತೋಟಗಾರಿಕಾ ವಿಶ್ವವಿದ್ಯಾಲಯ ಪ್ರಾರಂಭಗೊಂಡಿದ್ದು ಯಾವಾಗ ; ಅಲ್ಲಿಂದ ಇಲ್ಲಿಯವರೆಗೆ ಈ ವಿಶ್ವವಿದ್ಯಾಲಯಕ್ಕೆ ರಾಜ್ಯ ಸರಕಾರದಿಂದ ಬಿಡುಗಡೆಯಾಗಿರುವ ಹಣವೆಷ್ಟು ; ವಿಶ್ವವಿದ್ಯಾಲಯ ತಾನು ಕ್ರೂಢೀಕರಿಸಿದ ಸ್ವಂತ ಸಂಪನ್ಮೂಲ ಎಷ್ಟು ;

(ಆ) ಕೆಳದಿ ಶಿವಪ್ಪ ನಾಯಕ ತೋಟಗಾರಿಕಾ ವಿಶ್ವವಿದ್ಯಾಲಯ ಹೆಸರಲ್ಲಿ ಯಾವುದಾದರೂ ಎಫ್.ಡಿ. ಇಡಲಾಗಿದೆಯೇ ; ಇಟ್ಟಿದ್ದಲ್ಲಿ, ಅದರ ಮೊತ್ತವೆಷ್ಟು ;

(ಇ) ಇಲ್ಲಿ ತನಕ ವಿಶ್ವವಿದ್ಯಾಲಯಕ್ಕೆ ಕೇಂದ್ರ ಸರಕಾರದಿಂದ ಸಂಶೋಧನೆ ಕೈಗೊಳ್ಳಲು (ರಿಸರ್ಚ್‌ಗೆ) ಬಂದಿರುವ ಅನುದಾನವೆಷ್ಟು ; ಯಾವ ಭಾಗದಲ್ಲಿ ರಿಸರ್ಚ್ ಮಾಡಲಾಗಿದೆ ; ಈ ವಿಶ್ವವಿದ್ಯಾಲಯ ಅಡಿಯಲ್ಲಿರುವ ಕಾಲೇಜ್‌ಗಳು, ರಿಸರ್ಚ್ ಸೆಂಟರ್‌ಗಳ ಸಂಖ್ಯೆಯೆಷ್ಟು ; ಅವು ಎಲ್ಲೆಲ್ಲಿವೆ ; ಯಾವಾಗ ಪ್ರಾರಂಭವಾಯಿತು ;

(ಈ) ಈ ಸಂಸ್ಥೆಗಳಲ್ಲಿ ಎಷ್ಟು ಮೊತ್ತ ಹೂಡಿಕೆ (ಇನ್ವೆಸ್ಟ್) ಮಾಡಿದ್ದಾರೆ ; ಏನೆಲ್ಲಾ ಕೆಲಸಗಳಾಗಿವೆ ; ಎಷ್ಟು ಜನ ಸಿಬ್ಬಂದಿಗಳಿದ್ದಾರೆ ;

(ಉ) ಬ್ರಹ್ಮಾವರದಲ್ಲಿರುವ ಡಿಪ್ಲೊಮಾ ಕಾಲೇಜ್ ಯಾವಾಗ ಪ್ರಾರಂಭವಾಯಿತು ; ಯಾವುದೆಲ್ಲಾ (ಫೆಸಿಲಿಟೀಸ್) ಸೌಕರ್ಯಗಳು ಇವೆ ; ಈ ಸೌಕರ್ಯಗಳಿಗಾಗಿ ಎಷ್ಟು ಮೊತ್ತ ಹೂಡಿಕೆ ಆಗಿದೆ ; ಯಾವಾಗಿಂದ ಡಿಪ್ಲೊಮಾ ಕಾಲೇಜನ್ನು ಬಿ.ಎಸ್.ಸಿ. ತೋಟಗಾರಿಕೆ (B.Sc. Horticulture) ಪದವಿ ಕಾಲೇಜನ್ನಾಗಿ ಉನ್ನತೀಕರಿಸಲಾಗಿದೆ ; ವಿದ್ಯಾರ್ಥಿಗಳ ಸಂಖ್ಯೆಯೆಷ್ಟು ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ.226/ಪಿ5

**List of Questions**
**for Oral Answers**

**Total No. of**
**Questions - 15**

# LIST - 2

# KARNATAKA LEGISLATIVE COUNCIL

## ONE HUNDRED AND FIFTY SIXTH SESSION

## Tuesday, the 12th August, 2025

---

### GROUP - II

1. Minister for Large and Medium Scale Industries and Infrastructure Development
2. Minister for Textiles, Sugarcane Development and Sugar and Agricultural Marketing
3. Minister for Small Scale Industries and Public Enterprises
4. Minister for Mines and Geology and Horticulture
5. Minister for Municipalities and Haj
6. Minister for Co-operation
7. Minister for Urban Development and Town Planning

---

### SALES AND SUPPLY OF GOODS PRODUCED BY THE CO-OPERATIVE SOCIETIES

**Smt. Balkhees Banu (Elected by Legislative Assembly) -**

16 (252) Will the Minister for Co-operation be pleased to state:-

(a) the number of district industrial production supply and sales co-operative societies in the State ;

(b) whether the proposal is before the Government that the Government itself purchase and sell the goods which have been produced by the said co-operative societies ;

(c) if so, the steps taken in this regard ?

## NON-AVAILABLITY OF BASIC FACILITY FOR BUDA SITE HOLDERS

**Sri Y.M. Satish (Local Authorities Constituency) -**

17 (367) Will the Minister for Urban Development and Town Planning be pleased to state:-

(a) the particulars of step taken by the Government to resolve the hardship that are being faced by the buyers of approved sites due to the permission is being delayed for Ballari Urban Development Authority (BUDA) approved layouts ;

(b) whether it is true that the hardship is being faced by the buyers to get water, electricity and sewerage connection even after collecting taxes with regard to the approval of Ballari Urban Development Authority (BUDA) layouts ;

(c) there are no trained staff to attend to minor repairs of the cables of GESCOM/corporation, and the concerned staff do not have even the most basic spare parts required with regard to these cables, the intention of the Government to take the particular of step in this regard ;

(d) the sites in unauthorized layouts on R.S lands and NA lands are being given 'B' Khata and the sketches of the site with water, power and sewerage

connections. whereas, the reasons for non availability of basic facilities for the sites in Ballari Urban Development Authority (BUDA) layouts; the intention of the Government to take the particular step in this regard ?

## DEVELOPMENT OF UNIVERSITIES OF HORTICULTURAL SCIENCES

**Sri Nirani Hanamant Rudrappa (Graduates' Constituency) -**

18 (282) Will the Minister for Mines and Geology and Horticulture be pleased to state:-

(a) the total grant that has been released by the Government for the development of Universities of Horticultural Sciences in the State during the last 2 years; if not, the reasons for the same ; the report along with information be furnished; the timelimit within which the grant would be released ; (workwise information be furnished)

(b) whether it has come to the notice of the Government that the amount is being required for the infrastructure and other developmental works for the said universities; if so, the steps taken by the Government ; (details be furnished)

(c) whether it has come to the notice of the Government that there is a necessity of the Government grant for conducting various kinds of agricultural researches in the University of Horticultural Sciences, Bagalkot ; if so, the steps taken by the Government ; (details be furnished)

(d) whether the extent about 200-250 acres of land would be sanctioned by the Government for carrying out various kinds of agricultural researches in the

University of Horticultural Sciences, Balgalkot ; if so, the steps taken by the Government ?

**PROVIDING DRINKING WATER TO SINDHANUR CITY**

**Sri Basanagouda Badarli (Elected by Legislative Assembly) -**

19 (239) Will the Minister for Municipalities and Haj be pleased to state:-

(a) there is a large lake at the extent of 251 acres in the limits of Turuvihala village, which is located to the distance of 15 k.m from Sindhanur city and eventhough 24/7 drinking water project has been implemented already, the water is being supplied to Sindhanur city once in a five days, whether it has come to the notice of the Government that the water is not being supplied properly ;

(b) the date on which 24/7 water supply project which is the most expected dream of the people of Sindhanur city would be commenced ?

**SPECIAL PACKAGE TO FARMERS AND CONSTRUCTION OF COLD STORAGE IN BAGALKOT DISTRICT**

**Sri P.H. Pujar (Local Authorities Constituency) -**

20 (255) Will the Minister for Mines and Geology and Horticulture be pleased to state:-

(a) whether it has come to the notice of the Government that the serious issue of the loss is being caused to farmers from the bacterial blight, rot disease, wilt disease and stem borers diseases for pomegranate crop recently in Bagalkot district ; if so, whether the programmes have been chalked out by the Government with regard to provide the special package for pomegranate growers who have lost their crops ;

(b) the fruits like guava, grapes, etc as well as turmeric and red chillies are being grown extensively along with pomegranate, whether it has come to the notice of the Government that the farmers in Mudhol and Jamkhandi taluks are urging for cold storage from so many days for storing the same when they have not getting suitable price to their products; if so, the step taken by the Government ?

**FRADULENCE BY M/S ULTRA TECH CEMENT LIMITED TO FARMERS**

**Dr. Talwar Sabanna (Nominated) -**

21 (261) Will the Minister for Large and Medium Scale Industries and Infrastructure Development be pleased to state:-

(a) whether it has come to the notice of the Government that the fraudulence has been occurred by M/S. Ultra Tech Cement Limited of Malakhed village of Sedam taluk of Kalaburagi district without paying the fair price while purchasing agricultural land from the farmers of Hangana halli, Udagi, Huda(B) and Nrupatunga nagar villages for its fourth cement manufacturing unit ;

(b) whether it has been noticed that the fraudulence has been occurred towards the farmers by clear violation of the section 109 (1) of the Land Act, 1961 while issuing the notification for the purchasing land of the farmers for the fourth unit of M/S. Ultra Tech Cement Limited ;

(c) the farmers who have lost their land are conducting Dharan for 1712 days and during dharan 22 farmers have lost their lives, the reasons for not paying additional compensation of Rs. 4.50 lakh for them ;

(d) whether the Government would be contemplated for providing the compensation of Rs.10 lakh to each family who have lost their lives during a dharana as per Dr.Sarojini Mahishi report and to provide permanent job in the company for the family member of farmers who have lost their land ;

(e) whether an appropriate action would be taken by the Government to assist the farmers by conducting a judicial investigation against the companies which are making fraudulence to the farmers without paying an appropriate compensation for their land ?

**ENHANCEMENT OF HONORARIUM FOR MEMBERS OF URBAN LOCAL BODIES**

**Sri Sunilgouda Patil (Local Authorities Constituency) -**

22 (253) Will the Minister for Municipalities and Haj be pleased to state:-

(a) whether the proposal is before the Government for enhancement of the honorarium of Presidents and Members of urban local bodies like City Municipal Councils, Town Municipal Councils and Town Panchayats ; the clear stand of the Government with regard to enhancement the honorarium ;

(b) the date on which the honorarium of members has been revised earlier ; (details be furnished)

(c) the honorarium of said members at present ? (details be furnished)

**REGARDING ISSUANCE OF LAND ACQUISITION CERTIFICATE**

**Dr.Umashree (Nominated) -**

23 (297) Will the Minister for Urban Development and Town Planning be pleased to state:-

(a) whether the exemption has been given to get occupancy certificate (OC) to the owners of three floor building which has been constructed in the sites of 1200 square feet dimension in the State ;

(b) whether it would cause impediment to the building owners from the prevailing bylaws to implement this scheme in Gram Panchyat, City Municipal Councils and Town Municipal Council from the notification that has been issued by the Government under the Greater Bengaluru Governance Act, 2024 ;

(c) if the building owners in all villages and cities of the State are getting exemption from the Occupancy Certificate (OC) in this manner, whether it would be possible to implement of this scheme; if so, the manner in which the steps has been taken in this regard ? (information be furnished)

**REGARDING CLOSURE OF HOPCOMS OUTLETS**

**Sri Govinda Raju (Elected by Legislative Assembly) -**

24 (267) Will the Minister for Co-operation be pleased to state:-

(a) the total number of Hopcoms outlets in the State; the number of Hopcoms that are being operating at present; the number of outlets that have been closed ; if so, the reasons for the same ; (districtwise details be furnished)

(b) whether there is a rule that the particular of products should be marketed in Hopcoms outlets; in some outlets the fruits are being sold by the private persons, whether it has come to the notice of the Government that the same is being sold higher than the Hopcoms prices ;

(c) whether it has come to the notice of the Government that non horticulture items like rice bag and other items are being sold in Hopcoms outlets in various part of Bengaluru city ; details of the main purpose of Hopcoms ;

(d) if so, the number of outlets have been inspected till date ; the step taken for the same; whether it will cause inconvenience to the farmers thereof ;

(e) the number of staff who are working at present ; the number of staff which are lying vacant ; whether it will cause hardship for the daily work of the Hopcoms due to the shortage of staff ;

(f) whether it is true that the Hopcoms is in financial crisis ; if so, the step taken by the department to get rid of from the same ;

(g) whether the Hopcoms have borrowed the loan from the Government ; if so, the rate of interest for the same, and the purpose of the loan ?

## SCHEMES CHALKED OUT FOR WEAVER OF THE STATE

**Sri Keshava Prasad S (Elected by Legislatvie Assembly) -**

25 (272) Will the Minister for Textiles, Sugarcane Development and Sugar and Agricultural Marketing be pleased to state:-

(a) the particulars of schemes chalked out by the Government for the development of weavers of the State ; the steps taken for the implementation of the schemes ; the programmes that have been framed to create awareness among weavers ; (complete information be furnished)

(b) whether the marketing space has been created for the products of weavers; if so, the details thereof and the total amount thereof; the number of textile parks

in the State; the condition of the said parks and the profit that has been accrued by the said textile parks ; (complete information be furnished)

(c) the special effort by the Government to sell the products of handloom weavers ; whether the financial condition of handloom weavers has been improved ;

(d) the particulars of the profit for the handloom weavers and power loom weavers ; the reasons for not publishing the advertisement with regard to improved condition of weavers and availed the best prices for their products ;

(e) the particulars of other cities of the State including Bengaluru metropolitan city in which sale facility has been provided to products of handloom weavers; the total amount of products that have been sold in these sale spots; the number of handloom weavers who are directly benefited from the same ?

## GRANT RELEASED TO CHIKKAMAGALURU CITY MUNICIPAL COUNCIL

**Sri S.L. Bhojegowda (Teachers' Constituency) -**

26 (217) Will the Minister for Municipalities and Haj be pleased to state:-

(a) the grant that has been released by the Government to Chikkamagaluru City Municipal Council during the last 3 years; the particulars of developmental works that have been carried out; the grant that has been utilized; the grant that has been earmarked for the developmental works to the said City Municipal Council during the financial year 2025-26 ; the particulars of works that have been taken up ; (complete information be furnished)

(b) the particulars of plan that has been chalked out for the development of roads in the limit of Chikkamagaluru City Municipal Council ; the number of roads that have been developed during the last 3 years ; (complete details be furnished)

(c) with regard to Chikkamagaluru City Municipal Council in the Hon'ble Chief Minister's Amrut Nagarothan Phase-4 technical bids that have been submitted for the approval whether it has come to the notice of the Government that any process have not been occurred till date eventhough several months have been elapsed ; if so, the timelimit within which the works would be taken up by completing this procedure ; (complete details be furnished)

(d) the grant that has been released for the development of hindu burial ground and parks in the limit of Chikkamagaluru City Municipal Council till date; whether it has come to the notice of the Government that development has not been occurred till date eventhough the grant has been released thereof; if so, the timelimit within which the same would be developed ; (complete details be furnished)

(e) several people are falling sick day by day due to the bite of stray dogs in the limit of City Municipal Council, the step taken by the Government in this regard ; (complete details be furnished)

(f) there are poles of street lights in the layouts and other roads in the limit of City Municipal Council, whether it has come to the notice of the Government that there is a shortage of grant to fix the street lights ; if so, the time limit within which the grant would be released ? (complete details be furnished)

## CONVERSION OF AGRICULTURE LAND FOR NON-AGRICULTURE ACTIVITIES

**Sri K.S. Naveen (Local Authorities Constituency) -**

27 (284) Will the Minister for Urban Development and Town Planning be pleased to state:-

(a) the extent of acre of land that has been converted for non-agriculture activities in the State during the last 2 years ; (districtwise information be furnished)

(b) the extent of acre for which the Secretary to Government have the power for land conversion ; the extent of acre above for which the file would be submitted to the Minister to make land conversion ;

(c) whether it has come to the notice of the Government that the licence has not been issued by the authority to construct the house for e-khata holders in the limit of City Municipal Council and City Corporation in the State ; if so, the reason for non issuance of licence to construct the house eventhough the property tax is being paid as per the rule of administration with regard to the said land ; (details be furnished)

(d) the steps taken by the Government to prevent the hardship that is being caused to construct the house without sanctioning of loan for the construction of house from the bank or other societies due to the non-availablity of the permission by the local authority to construct the house for the e-khata holders ? (complete information be furnished)

## TRADE LICENCE POLICY IN THE STATE

**Sri D.S. Arun (Local Authorities Constituency) -**

28 (169) Will the Minister for Urban Development and Town Planning be pleased to state:-

(a) whether it is mandatory to get trade licence for businessmen, entrepreneurs and individuals of the service sector of the State ;

(b) the revenue that is accrued to the exchequer of the State Government through the implementation of trade licence ; (distrcitwise information be furnished)

(c) whether unified guiding principle is being followed while issuance of trade licence by all the Municipal Corporations in the State ; (details be furnished)

(d) whether it has come to the notice of the Government that there is a delay in the process of issuing trade licence and the corruption is being occurred from the officers ; if so, the steps taken by the Government in this regard ;

(e) whether there is a disparity in the licence fee as per the area; the stand of the Government with regard to unifying the same ?

**GRANT RELEASED UNDER SCSP/TSP**

**Sri H.P. Sudham Das (Nominated) -**

29 (172) Will the Minister for Mines and Geology and Horticulture be pleased to state:-

(a) the grant that has been released during the financial years 2021-22, 2022-23 and 2024-25 to the department of Mines and Geology under the Karnataka Government ambitious Act SCSP/TSP ;

(b) out of SCSP/TSP grant that has been released to the department during the period of the said financial years, the particulars of schemes of implementation for which the same has been spent ;

(c) the particulars of work plans of sub plan regarding the allocations of grant that has been prepared by studying/consulting the concerned community development by identifying the gap of development between scheduled community and the general community during the periods from the financial years 2021 to 2025 by the department of Mines and Geology as per section 17 of the said Act ; (the copies be furnished)

(d) the particulars of step taken by the department of Mines and Geology to ensure that the released amount under the said grant is merely utilized for the development of residing colony/areas of the person belonging only to the scheduled caste or scheduled tribes as mandated under the section 15 and 16 of the said Act ? (concerned document be furnished)

## UNIVERSITY OF HORTICULTURAL SCIENCES AND COLLEGES OF HORTICULTURE/RESEARCH CENTRES

**Sri Manjunatha Bhandari (Local Authorities Constituency) -**

30 (233) Will the Minister for Mines and Geology and Horticulture be pleased to state:-

(a) the date on which the Keladi Shivappa Nayaka University of Agriculture and Horticultural Sciences has been commenced ; the amount that has been released by the State Government to this university from the commencement of the university to till date ; details of the own resources that have been accumulated by the university itself ;

(b) whether any fixed deposit has been made in the name of Keladi Shivappa Nayaka University of Agriculture and Horticultural Sciences ; if so, the amount thereof ;

(c) the grant that has been provided by the Central Government to carrying out research till date; the particular of the region in which the research has been carried out; the number of colleges and research centres which are coming under this university ; the particulars of places where they have been located ; the date on which the same have been commenced ;

(d) the amount that has been invested in these institutions ; the particulars of works which have been occurred ; the number of staff therein ;

(e) the date on which the Diploma college of agriculture has been commenced which is located in Bramhavar; the particulars of facilities thereof ; the amount that has been invested for these facilities; the date from which the Diploma college has been upgraded as B.Sc. Horticulture degree college; the number of students thereof ? (details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, PWS-226-Bengaluru, P2